

ಉಪಾಯಗಳನ್ನು ದಾಂಪತ್ಯ ಚಿಕಿತ್ಸಕ ತಮಗೆ ಕಲಿಸಬೇಕೆಂದು ಅವರು ನಿರೀಕ್ಷಿಸಿದ್ದರು.

ವಾಸ್ತವವಾಗಿ ಇಂತಹ ಯಾವ ಉಪಾಯಗಳೂ ಇರುವುದಿಲ್ಲ. ಸಂಗಾತಿಯನ್ನು ಹೊಗಳಿ, ಅವರಿಗೆ ಬೇಕಾಗಿದ್ದನ್ನು ಕೊಡಿಸಿ, ಅವರನ್ನು ತಿರುಗಾಟಕ್ಕೆ ಕರೆದುಕೊಂಡು ಹೋಗುವುದರ ಮೂಲಕ ಅವರನ್ನು ಖುಷಿಯಾಗಿ ಇಡಬಹುದು ಎನ್ನುವ ಉಪಾಯಗಳನ್ನು ಸೂಚಿಸುವ ಪುಸ್ತಕಗಳಿವೆ. ಆಪ್ತಸಲಹೆಯ ಹೆಸರಿನಲ್ಲಿ ಇಂತಹ ಕುತಂತ್ರಗಳನ್ನು ಪಾಲಿಸಬೇಕೆಂದು ಉಪದೇಶಿಸುವವರೂ ಇರಬಹುದು. ಆದರೆ ಇವೆಲ್ಲಾ ಕೇವಲ ತಾತ್ಕಾಲಿಕವಾದ ಉಪಾಯಗಳು. ವಾಸ್ತವವಾಗಿ ಪ್ರಾಮಾಣಿಕವಲ್ಲದ ಇಂತಹ ಬೂಟಾಟಿಕೆಯ ನಡವಳಿಕೆಗಳು ದೀರ್ಘಕಾಲದಲ್ಲಿ ಸಂಬಂಧಗಳನ್ನು ಹಾಳುಮಾಡುವ ಸಾಧ್ಯತೆಗಳೇ ಹೆಚ್ಚು. ಹಾಗಾಗಿ ಇಂತಹ ಅಡ್ಡದಾರಿಗಳನ್ನು ತುಳಿಯುವ ಪ್ರಯತ್ನವನ್ನು ನಿಲ್ಲಿಸಲೇಬೇಕು.

ಸಂಗಾತಿಯ ಎದುರು ತಮ್ಮ ತಪ್ಪನ್ನು ಒಪ್ಪಿಕೊಂಡು ಮುಂದೆ ಸೌಹಾರ್ದಯುತವಾಗಿ ಬದುಕುವ ದಾರಿಯನ್ನು ಹುಡುಕಿಕೊಳ್ಳುವ ಪ್ರಯತ್ನಗಳು ತಾತ್ಕಾಲಿಕವಾಗಿ ದಾಂಪತ್ಯವನ್ನು ಕಷ್ಟಕ್ಕೆ ಸಿಲುಕಿಸಬಹುದು. ಆದರೆ ನಿಧಾನವಾಗಿ ದಾಂಪತ್ಯಕ್ಕೆ ಮರುಜೀವ ತುಂಬಲು ಸಾಧ್ಯವಿದೆ. ಇಂತಹ ಮಾರ್ಗಗಳು ಹೊರಸಂಬಂಧವನ್ನು ಮುಂದುವರಿಸಿಕೊಂಡು ಹೋಗುವ ಉದ್ದೇಶ ಹೊಂದಿರುವವರಿಗೆ ಸಮ್ಮತವಾಗದಿದ್ದಾಗ ದಾಂಪತ್ಯ ಚಿಕಿತ್ಸಕ ಮಾಡಬಹುದಾದದ್ದು ಬಹಳ ಕಡಿಮೆ.

ಕೆಲವೊಮ್ಮೆ ಸಂಗಾತಿಯ ವಂಚನೆಯ ಅರಿವಿದ್ದರೂ ಅದನ್ನು ಎದುರಿಸಲಾಗದ ಮಾನಸಿಕ, ಸಾಮಾಜಿಕ, ಆರ್ಥಿಕ ಸ್ಥಿತಿಯಲ್ಲಿ ಮೋಸಹೋದವರು ಇರಬಹುದು. ಇಂತವರಿಗೆ ಹೊರಸಂಬಂಧಗಳ ವಿಷಯವನ್ನು ಸಂಗಾತಿಯ ಜೊತೆ ಚರ್ಚೆ ಮಾಡುವ ಧೈರ್ಯವಿರುವುದಿಲ್ಲ. ಆದರೆ ಅದನ್ನು ಒಪ್ಪಿಕೊಂಡು ಬದುಕುವುದೂ ಕಷ್ಟವಾಗುತ್ತಿದೆ ಎನ್ನುವ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಇಂತವರು ದಾಂಪತ್ಯ ಚಿಕಿತ್ಸಕರ ಬಳಿ ಬರುತ್ತಾರೆ.

ಇನ್ನೂ ಕೆಲವರು ಸಂಗಾತಿಯ ಜೊತೆ ಇದಕ್ಕಾಗಿ ಜಗಳವಾಡಿದ ಮೇಲೂ ಪ್ರಯೋಜನವಾಗದೆ ಆಪ್ತಸಲಹೆಗೆ ಬರುತ್ತಾರೆ. ನನ್ನ ಬಳಿ ಬಂದಿದ್ದ 45ರ ಮಹಿಳೆಯೊಬ್ಬರು ಪತಿಯ ಹೊರಸಂಬಂಧದಿಂದಾಗಿ ಮನೆ ನರಕವಾಗಿರುವುದನ್ನು ಹೇಳುತ್ತಾ ತನ್ನ ಅಸಹಾಯಕತೆಯನ್ನು ತೋಡಿಕೊಂಡರು.

ಸರ್ಕಾರಿ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಆ ವ್ಯಕ್ತಿ ಸಹೋದ್ಯೋಗಿಯೊಂದಿಗೆ ದೈಹಿಕ ಸಂಬಂಧ ಹೊಂದಿದ್ದರು. ಪೊಲೀಸ್ ಇಲಾಖೆ, ನ್ಯಾಯಾಲಯಗಳಲ್ಲೆಲ್ಲಾ ತನಗೆ ಪ್ರಭಾವವಿರುವುದಾಗಿ ಹೇಳಿಕೊಳ್ಳುತ್ತಿದ್ದ ಆತ ‘ಅಲ್ಲೆಲ್ಲೂ ನಿನಗೆ ಸಹಾಯ ಸಿಗುವುದಿಲ್ಲ’ ಎಂದು ಹೆಂಡತಿಯನ್ನು ಹೆದರಿಸುತ್ತಿದ್ದ. ಜೊತೆಗೆ ಹೆಂಡತಿ ಹೊರಸಂಬಂಧದ ಪ್ರಶ್ನೆ ಎತ್ತಿದಾಗಲೆಲ್ಲಾ ಅವಳಿಗೆ ದೈಹಿಕ ಹಿಂಸೆ ನೀಡಿ ಬಾಯಿ ಮುಚ್ಚಿಸುತ್ತಿದ್ದ. ಮಕ್ಕಳ ಜೊತೆ ಸರಿಯಾಗಿ ನಡೆದುಕೊಳ್ಳುತ್ತಾ ಅವರನ್ನೂ ಕೂಡ ಅಮ್ಮನ ವಿರುದ್ಧ ಎತ್ತಿಕಟ್ಟಿದ್ದ. ಇಂತಹ ಕ್ಲಿಷ್ಟ ಪರಿಸ್ಥಿತಿಯಲ್ಲಿ ವಿಚ್ಛೇದನಕ್ಕೆ ಸಿದ್ಧವಾಗಿ ಪತಿಯನ್ನು ಎದುರಿಸುವುದೊಂದೇ ಮಹಿಳೆಗೆ ಉಳಿದ ದಾರಿಯಾಗಿತ್ತು. ಆದರೆ ಅಂತಹ ಕಠಿಣ ನಿರ್ಧಾರಕ್ಕೆ ಸಿದ್ಧಳಿಲ್ಲದ ಅವರಿಗೆ ನಾನೇನು ಸಹಾಯ ಮಾಡಲು ಸಾಧ್ಯವಿತ್ತು?

ಪತಿಗೆ ಗೊತ್ತಿಲ್ಲದೆಯೇ ಅವರ ಹೊರಸಂಬಂಧವನ್ನು ಬಿಡಿಸಲು ಸಾಧ್ಯವೇ ಎಂದೂ ಕೂಡ ಕೆಲವು ಮಹಿಳೆಯರು ಕೇಳುತ್ತಾರೆ! ನನಗೆ ಫೋನ್ ಕರೆ ಮಾಡಿದ್ದ ಮಹಿಳೆಯೊಬ್ಬರು ತನ್ನ ತಂಗಿಯ ಗಂಡನಿಗೆ ವಿವಾಹಬಾಹಿರ ಸಂಬಂಧವಿದೆ, ಆ ಚಟವನ್ನು ಬಿಡಿಸಲು ಸಹಾಯ ಮಾಡುತ್ತೀರಾ ಎಂದು ಕೇಳಿದ್ದರು. ಮಾಟ ಮಂತ್ರದವರು ಮಾಡುತ್ತೇವೆಂದು ಹೇಳಿಕೊಳ್ಳುವ ಕೆಲಸ ಇದು. ಅಂತಹ ಯಾವುದರಲ್ಲಿಯೂ ನಂಬಿಕೆ ಇಲ್ಲದ ನಾನು ‘ಆ ದಂಪತಿಯನ್ನು ನನ್ನ ಬಳಿ ಕರೆತನ್ನಿ, ಮಾತನಾಡಿ ಸಮಸ್ಯೆಯನ್ನು ಪರಿಹರಿಸೋಣ’ ಎಂದಷ್ಟೇ ಹೇಳಲು ಸಾಧ್ಯವಾಗಿತ್ತು.

ವಿವಾಹಬಾಹಿರ ಸಂಬಂಧಗಳು ಇನ್ನೂ ಹಲವಾರು ರೀತಿಯ ವಿಚಿತ್ರ